# ಸ್ನಾನ: ಸುಖವಾಗಿ ಆಯ್ತಾ?

■ ನಿಸರ್ಗ ಎಚ್. ಮಲ್ಲಿಗೆರೆ

**ಜಾ**ಗತಿಕ ಮಟ್ಟದಲ್ಲಿ 'ಸ್ಕ್ಯಾಂಡಿನೇವಿಯನ್ ಮನೆ ವಿನ್ಯಾಸ' ಇದೀಗ ಜನಪ್ರಿಯವಾಗಿದೆ. ಅಡುಗೆ ಮನೆಯಾಗಲಿ, ಸ್ನಾನ ಗೃಹವಾಗಲಿ– ಮನೆಯಲ್ಲಿರುವ ಎಲ್ಲರ ಅಗತ್ಯಗಳು ಈಡೇರುವಂತೆ, ಗೊಂದಲವಿಲ್ಲದಂತೆ ವ್ಯವಸ್ಥಿತವಾಗಿ ವಿನ್ಯಾಸ ರೂಪಿಸುವುದು ಈ ಶೈಲಿಯ ಮುಖ್ಯ ಧೋರಣೆ.

ಸ್ನಾನದ ಮನೆಯ ಪರಿಕರಗಳ ವಿನ್ಯಾಸಕಾರರಾದ ಅರ್ನಿ ಅರೋಮಾ ಇದನ್ನು ಹೀಗೆ ವಿವರಿಸುತ್ತಾರೆ– ಸ್ಕ್ಯಾಂಡಿನೇವಿಯನ್ ವಿನ್ಯಾಸ ಪ್ರಕೃತಿಗೆ ಹತ್ತಿರವಾದದ್ದು. ಶೈಲಿ ಸರಳವಿದ್ದರೂ ವಿಶಿಷ್ಟ. ನಮ್ಮ ಕೆಲಸಗಳಿಗೆ ಅನುಕೂಲವಾಗುವಂತಿದೆ.



'ಇನ್ನಷ್ಟು ವಿವರಿಸಿ' ಎಂದಾಗ ಅರ್ನಿ ಅರೋಮಾ ಹೇಳಿದ್ದು– ಬಾತ್‌ಟಬ್ ನೋಡಲು ತುಂಬ ಆಕರ್ಷಕ ವಿನ್ಯಾಸ ಹೊಂದಿದೆ ಎಂದಿಟ್ಟುಕೊಳ್ಳಿ. ಆದರೆ ಸ್ನಾನ ಮಾಡಲು ಆರಾಮದಾಯಕ ಅನ್ನಿಸದೆ ಇದ್ದರೆ, ಏನು ಪ್ರಯೋಜನ?

ಅದೂ ನಿಜವೇ. ಆಕರ್ಷಕ ವಿನ್ಯಾಸವೂ ಇರಬೇಕು; ಸ್ನಾನ ಮಾಡಲು ಆರಾಮದಾಯಕವೂ ಅನ್ನಿಸಬೇಕು. ಆದರೆ ಬೆಂಗಳೂರಿನಂತಹ ನಗರಗಳಲ್ಲಿ ಮಧ್ಯಮ ಮಟ್ಟದ ಮನೆ. ಅದರೊಳಗೊಂದು ಆರಾಮದ ಸ್ನಾನಗೃಹ ಹೇಗೆ ಕಟ್ಟುವುದು?

ಸ್ಥಳದ ನಿರ್ವಹಣೆಯಲ್ಲಿ ಬುದ್ಧಿವಂತಿಕೆ ಉಪಯೋಗಿಸಿದರೆ ಎಲ್ಲವೂ ಸಾಧ್ಯ. ಮನೆಯಲ್ಲಿ ನಾಲ್ಕೈದು ಮಂದಿಯಂತೂ ಇದ್ದೇ ಇರುತ್ತಾರೆ. ನಾಲ್ಕು ಮಂದಿಯೂ ಬೇರೆ ಬೇರೆ ಸೋಪು/ಶಾಂಪೂ ಬಳಸುವುದು ಈಗ ಸಾಮಾನ್ಯ. ಅದರಲ್ಲೂ ಗಂಡು ಮಕ್ಕಳ ಮತ್ತು ಹೆಣ್ಣು ಮಕ್ಕಳ ಆಯ್ಕೆ ಬೇರೆಯೇ ಇರುತ್ತದೆ. ಮನೆಯ ಎಲ್ಲ ಸದಸ್ಯರಿಗೂ ಅನುಕೂಲವಾಗುವಂತೆ ಸೋಪು– ಶಾಂಪೂ ಇಡಲು ಪ್ರತ್ಯೇಕ ಜಾಗ ಮಾಡಬೇಕು. ಕನ್ನಡಿಯನ್ನು ಕೂಡಿಸುವ ಜಾಗವೂ ಎಲ್ಲರ ಅನುಕೂಲಕ್ಕೆ ತಕ್ಕಂತೆ ಇರಬೇಕು. ಬಟ್ಟೆಗಳನ್ನಿಡಲು ಸ್ಥಳ ಕೊಡಬೇಕು. ಕಮೋಡ್ ಕೂರಿಸುವ ಸ್ಥಳವೂ ಅನಾನುಕೂಲ ಅನ್ನಿಸಬಾರದು.

'ಈಗಿನ ಮನೆಗಳಲ್ಲಿ ಅತಿ ದೊಡ್ಡ ಸ್ನಾನಗೃಹಗಳು ಇಲ್ಲದಿದ್ದರೂ, ಕಿರಿಕಿರಿಯಾಗುವಷ್ಟು ಚಿಕ್ಕ ಸ್ನಾನಗೃಹ ಹೊಂದಲು ಯಾರೂ ಬಯಸುವುದಿಲ್ಲ. ಸ್ವಲ್ಪ ವಿಶಾಲವಾಗಿರುವ ಬಾತ್‌ರೂಮ್ ಬಹುಜನರ ಆದ್ಯತೆ. ಅದನ್ನು ಗಮನದಲ್ಲಿ ಇಟ್ಟುಕೊಂಡೇ ನಾವು ಸ್ನಾನಗೃಹದ ಪರಿಕರಗಳನ್ನು ವಿನ್ಯಾಸಗೊಳಿಸಿದ್ದೇವೆ' ಎನ್ನುತ್ತಾರೆ ಅರೋಮಾ.

ವಿನ್ಯಾಸಕ ಸೌಲಿ ಸುಮೇಲ ಅವರು ಸ್ನಾನಗೃಹದ ಬಾಳಿಕೆಯ ವಿನ್ಯಾಸದ ಬಗ್ಗೆ ಮಾತನಾಡುತ್ತಾರೆ. 'ಇಂದು ಮನೆಯನ್ನು ಲೇಟೆಸ್ಟ್ ಎನ್ನುವಂತೆ ವಿನ್ಯಾಸಗೊಳಿಸಿದರೆ, ಅದು ಮುಂದಿನ ಹತ್ತು ವರ್ಷಗಳ ತನಕವೂ ಪ್ರಸ್ತುತ ಎನಿಸುವಂತಿರಬೇಕು. ಸ್ನಾನಗೃಹದ ಒಳಹೊಕ್ಕರೆ ಮನಸ್ಸಿಗೆ ಮುದ ನೀಡಬೇಕು. ಸ್ಕ್ಯಾಂಡಿನೇವಿಯನ್ ವಿನ್ಯಾಸವನ್ನು ಸಮಕಾಲೀನ ಶೈಲಿಗೆ ಹೊಂದಿಸಿಕೊಂಡು ನಾವು ಹೊಸ ವಿನ್ಯಾಸಗಳನ್ನು ರೂಪಿಸುತ್ತೇವೆ' ಎನ್ನುತ್ತಾರೆ ಅವರು.

ಅರೋಮಾ ಮತ್ತು ಸೌಲಿ ಅವರ ಕೌಶಲ್ಯದಲ್ಲಿ ಅರಳಿದ ಸ್ನಾನಗೃಹದ ಪರಿಕರಗಳು, ಸ್ಕ್ಯಾಂಡಿನೇವಿಯನ್ ಶೈಲಿಯನ್ನು ಆಧುನಿಕ ಕಾಲಕ್ಕೆ ತಕ್ಕಂತೆ ರೂಪಿಸಿವೆ. ಸಿಂಕ್, ಬಾತ್ ಟಬ್, ಕನ್ನಡಿ, ಕಮೋಡ್, ಬಟ್ಟೆ, ಸೋಪು– ಶಾಂಪೂ, ಕೈತೊಳೆಯುವ ಸಾಬೂನು ಎಲ್ಲಕ್ಕೂ ಇಲ್ಲಿ ವ್ಯವಸ್ಥಿತ ವಿನ್ಯಾಸಗಳಿವೆ. ಸಿಂಕ್‌ಗೆ ಹೊಂದಿಕೊಂಡಂತೆ ಕೆಳಭಾಗದಲ್ಲಿ ಚೌಕಾಕಾರದ ಮರದ ಕಪಾಟು, ಸಿಂಕ್‌ನ ಮೇಲ್ಭಾಗ, ಸಿಂಕ್‌ಗೆ ಹೊಂದಿಕೊಳ್ಳುವಂತೆಯೂ ಕಪಾಟು. ಕಮೋಡ್ ಶುಚಿಗೊಳಿಸುವ ವಸ್ತುಗಳನ್ನು ಮಕ್ಕಳ ಕೈಗೆಟುಕದಂತೆ ಇಡಲು ಮೇಲಿನ ಕಪಾಟು ಬಳಸಬಹುದು. ಪಕ್ಕದಲ್ಲಿಯೇ ಟವೆಲ್ ಇರಿಸಲು ಸರಳು. ಎಲ್ಲ ವಸ್ತುಗಳನ್ನು ಒಂದೇ ಕಡೆ ತುಂಬಿ, ಹುಡುಕುವ ಗೋಜು ಇಲ್ಲಿಲ್ಲ. ಚಂದದ ಕನ್ನಡಿ ಇರುವುದರಿಂದ ಐಷಾರಾಮಿ ಹೋಟೆಲ್‌ನ ಸ್ನಾನ ಗೃಹ ಹೊಕ್ಕಂತೆ ಭಾಸವಾಗುತ್ತದೆ.

ಪುಟ್ಟ ಮಕ್ಕಳಿಗೆ ವಾಷ್ ಬೇಸಿನ್ ಎಟುಕುವ ಎತ್ತರದಲ್ಲಿ ಇಲ್ಲ. ಆದ ಕಾರಣ, ವಾಷ್ ಬೇಸಿನ್ ಮುಂಭಾಗ ಒಂದು ಮರದ ಮೆಟ್ಟಿಲನ್ನು ಅಳವಡಿಸಲಾಗಿದೆ. ಗುಂಡಿ ಒತ್ತುತ್ತಿದ್ದಂತೆಯೇ ಮೆಟ್ಟಿಲು ಮೇಲೆ ಬರುತ್ತದೆ. ಮಕ್ಕಳು ಅದರ ಮೇಲೆ ಆರಾಮವಾಗಿ ನಿಲ್ಲಬಹುದು. ●